## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ.186 /2024

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿಲ್ಪಾ ಹೆಚ್ |
| ಗಂಡನ ಹೆಸರು | : | ಸಿದ್ದೇಗೌಡ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಜಿ ಬಿ ಸರಗೂರು ಪ್ರಸ್ತುತ ವಾಸಃ ಸರಸ್ವತಿಪುರಂ, ಮೈಸೂರು |

**ಸಾಕ್ಷಿಯನ್ನು ದಿನಾಂಕಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ–1 ನನ್ನ ಗಂಡ, ಚಾಸಾ 2 ನನ್ನ ಮಾವ ಹಾಗೂ ಚಾಸಾ 3 ನನ್ನ ಜಮೀನಿನಲ್ಲಿ ಕೆಲಸ ಮಾಡುವವರು. ದಿನಾಂಕ 03.04.2024 ರಂದು ಚಾಮನಹಳ್ಳಿ, ಹನುಮಂತಪುರದ ಸರ್ವೆ ನಂ.36 ಹಾಗೂ 37 ನಮ್ಮ ಜಮೀನಿನ ಬಳಿ ಆರೋಪಿಗಳು ಬಂದು ಗಲಾಟೆ ಮಾಡಿ ಸದರಿ ಜಮೀನಿಗೆ ಹಾಕಿದ ತಂತಿ ಬೇಲಿ ಹಾಗೂ ಸುಮಾರು 12 ಕಲ್ಲು ಕಂಬಗಳನ್ನು ಮುರಿದು ಸುಮಾರು 10 ಸಾವಿರದಷ್ಟು ನಷ್ಟ ಮಾಡಿರುತ್ತಾರೆ. ಈ ಬಗ್ಗೆ ನನ್ನ ಗಂಡನ ಹಾಗೂ ಮಾವ ಆರೋಪಿಗಳನ್ನು ವಿಚಾರಿಸಿದಾಗ ಅವರ ಮೇಲೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಈ ಬಗ್ಗೆ ನನ್ನ ಗಂಡ ಚಾಸಾ 1 ರವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. 1, 3 ಹಾಗೂ 5 ನೇ ಆರೋಪಿಗಳು ಗೈರು ಹಾಜರಾಗಿದ್ದು ಅವರ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು 1, 3 ಹಾಗೂ 5 ನೇ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸದರಿ ಜಮೀನು ಎಮ್ ಕನ್ನೇನಹಳ್ಳಿ ಗ್ರಾಮದ ಸರ್ವೆ ನಂ. 36 ರಲ್ಲಿ 4 ಎಕರೆ ಇರುತ್ತದೆ ಎಂದರೆ ಸರಿ. ಸದರಿ ದಿನದಂದು ನನ್ನ ಮಾವನಾದ ಚಾಸಾ 2 ಹಾಗೂ ಕೆಲಸದವರಾದ ಚಾಸಾ 3 ರವರು ಜಮೀನಿನ ಬಳಿ ಇದ್ದಾಗ ಆರೋಪಗಳು ಅಕ್ರಮ ಕೂಟ ಸೇರಿ ಅವರನ್ನ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಪೋಲಿಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಕೆ ಎಸ್ ಎಮ್ ವಕೀಲರಿಂದ**

ನಾನು ಮೈಸೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನನ್ನ ಗಂಡ ವ್ಯಾಪಾರ ಮಾಡಿಕೊಂಡಿರುತ್ತಾರೆ. ನನ್ನ ಗಂಡ ವ್ಯಾಪಾರದ ಜೊತೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಸದರಿ ಘಟನೆ ನಡೆಯಿತು ಎಂದು ಹೇಳಲಾದ ದಿನ ನಾನು ಮೈಸೂರಿನಲ್ಲಿ ಇದ್ದಿರುತ್ತೇನೆ ಎಂದರೆ ಸರಿ. ನಾನು ಕೃತ್ಯ ನಡೆಯಿತು ಎಂದು ಹೇಳಲಾದ ಘಟನೆಯನ್ನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.36 ಹಾಗೂ 37 ರ ಜಮೀನನ್ನು ನಾನು ಹಾಗೂ ನನ್ನ ಗಂಡನಾದ ಚಾಸಾ 1 ರವರು 1 ನೇ ಆರೋಪಿ ಹಾಗೂ ಅವರ ಕುಟುಂಬದವರಿಂದ ಕ್ರಯಪತ್ರದ ಮೂಲಕ ಖರೀದಿಸಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಆದ ನಂತರ ಸದರಿ ಕ್ರಯಕ್ಕೆ ಪಡೆದ ಜಮೀನಿಗೆ ಸಂಬಂಧಿಸಿದಂತೆ ಊರಿನಲ್ಲಿ ಪಂಚಾಯಿತಿ ನಡೆದಿರುತ್ತದೆ ಎಂದರೆ ಸರಿ. ಪಂಚಾಯಿತಿಯಲ್ಲಿ ತೀರ್ಮಾನವಾಗಿ ನಾನು ಹಾಗೂ ನನ್ನ ಗಂಡ ಚಾಸಾ 1 ರವರು ಕ್ರಯಕ್ಕೆ ಪಡೆದ ಜಮೀನಿನ ಪೈಕಿ 1 ಎಕರೆ 10 ಗುಂಟೆ ಜಮೀನನ್ನು 1 ನೇ ಆರೋಪಿಯ ಹೆಂಡತಿಯ ಹೆಸರಿಗೆ ವಾಪಸ್ಸು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ನಾವು 1 ನೇ ಆರೋಪಿ ಹಾಗೂ ಅವರ ಕುಟುಂಬದವರಿಂದ ಮೋಸ ಮಾಡಿ ಕ್ರಯಪತ್ರ ಬರೆಸಿಕೊಂಡಿರುವುದಾಗಿ ತೀರ್ಮಾನವಾಗಿ ನಂತರ 1 ಎಕರೆ 10 ಗುಂಟೆ ಜಮೀನನ್ನು ವಾಪಸ್ಸು ನೀಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಯಾವುದೇ ಮೋಸ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 1 ಎಕರೆ 10 ಗುಂಟೆ ಜಮೀನಿಗೆ ಸಂದಬಂಧಿಸಿದಂತೆ 4 ನೇ ಆರೋಪಿ ಅಳತೆ ಮಾಡಿಸಿದ್ದು ಸದರಿ ಅಳತೆಯ ಪ್ರಕಾರ ನಾವು 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಒತ್ತುವರಿಯಾದ 6 ಗುಂಟೆ ಜಮೀನನ್ನು ಬಿಟ್ಟು ಬೇಲಿ ಹಾಕಿಕೊಳ್ಳುವಂತೆ ಆರೋಪಿಗಳು ತಿಳಿಸಿದ್ದರೂ ಸಹ ನಾವು ಅದನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಮೇಲೆ ಹೇಳಿದಂತೆ 6 ಗುಂಟೆ ಜಮೀನನ್ನ ಒತ್ತುವರಿ ಮಾಡಿಕೊಂಡ ನಂತರ 4 ನೇ ಆರೋಪಿ ನನ್ನ ಹಾಗೂ ನನ್ನ ಹೆಂಡತಿ ವಿರುದ್ಧ ಒತ್ತುವರಿ ಬಿಡಿಸುವ ಸಂಬಂಧ ಹಾಗೂ ತಿರುಗಾಡುವ ದಾರಿಯ ಸಂಬಂಧ ಅಸಲು ದಾವಾ 135/2026 ರಂತೆ ದಾವೆ ಹೂಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಸಂಪೂರ್ಣ ಜಮೀನಿನ ಸುತ್ತಲೂ ತಂತಿ ಬೇಲಿ ಹಾಕಿಸಿಕೊಂಡು ಅದಕ್ಕೆ ಸಿಸಿ ಕ್ಯಾಮೆರಾ ಸಹ ಅಳವಡಿಸಿರುತ್ತೇವೆ ಎಂದರೆ ಸರಿ. ಸದರಿ ಒತ್ತುವರಿಯಾದ ಜಾಗದಲ್ಲಿ ಯಾವುದೇ ಬೇಲಿ

ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ತಂತಿ ಬೇಲಿ ಹಾಗೂ ಕಲ್ಲು ಕಂಬವನ್ನು ಮುರಿದಿರುವುದಿಲ್ಲ ಹಾಗೂ ನನ್ನ ಮಾವನಾದ ಚಾಸಾ 2 ಹಾಗೂ ಚಾಸಾ 3 ರವರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**